# ಕನ್ನಡ ಪತ್ರಿಕೆಗಳಲ್ಲಿ ಕಪ್ಪತ್ತಗುಡ್ಡ ಒಂದು ಅವಲೋಕನ

**ಸರೋಜಿನಿ ನೀ. ಹೊಸಕೇರಿ**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ
ಕಲಾದಗಿ, ಬಾಗಲಕೋಟೆ.

**DOI: https://doi.org/10.5281/zenodo.18008079**

## ABSTRACT:

ಕಪ್ಪತ್ತಗುಡ್ಡವು ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಒಂದು ಪ್ರಮುಖ ಪರ್ವತ ಶ್ರೇಣಿ ಇದನ್ನು ಚಿನ್ನದ ಬೆಟ್ಟ ಎಂತಲೂ ಕರೆಯುತ್ತಾರೆ. ಪ್ರಕೃತಿಯ ಸೊಬಗು, ಅಪರೂಪದ ಜೀವವೈವಿಧ್ಯ ಹಾಗೂ ಸಾಂಸ್ಕೃತಿಕ ಪರಂಪರೆಯಿಂದಾಗಿ ಇದು ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ಕನ್ನಡ ಪತ್ರಿಕೆಗಳು ಮತ್ತು ಪರಿಸರ ಹೋರಾಟಗಾರರು ಈ ಗುಡ್ಡದ ರಕ್ಷಣೆಗಾಗಿ ನಿರಂತರವಾಗಿ ದನಿ ಎತ್ತುತ್ತಲೇ ಬರುತ್ತಿದ್ದಾರೆ. ಕಪ್ಪತ್ತಗುಡ್ಡ ಕೇವಲ ಒಂದು ಬೆಟ್ಟವಲ್ಲ ಅದು ಕರ್ನಾಟಕದ ಜೀವವೈವಿಧ್ಯದ ಆಸ್ತಿ. ಸಾಂಸ್ಕೃತಿಕ ನೆಲೆ, ಪರಿಸರ ಹೋರಾಟದ ಸಂಕೇತ ಇದರ ಸಂರಕ್ಷಣೆಯು ನಮ್ಮ ಮುಂದಿನ ಪೀಳಿಗೆಗೆ ನಾವು ನೀಡುವ ದೊಡ್ಡ ಕೊಡುಗೆಯಾಗಿದೆ. ಸರ್ಕಾರ, ಸಾರ್ವಜನಿಕರು ಮತ್ತು ಸ್ಥಳೀಯ ಸಮುದಾಯಗಳು ನಿರಂತರವಾಗಿ ಇದರ ರಕ್ಷಣೆಗೆ ಶ್ರಮಿಸಿದರೆ ಮಾತ್ರ ಈ ಸಂಜೀವಿನಿ ಬೆಟ್ಟ ಸುರಕ್ಷಿತವಾಗಿ ಉಳಿಯಲು ಸಾಧ್ಯವೆಂದು ತಿಳಿಸುವುದೇ ಈ ಲೇಖನದ ಮುಖ್ಯ ಆಶಯ.

## KEYWORDS:

ಕಪ್ಪತ್ತಗುಡ್ಡ, ಸಾಂಸ್ಕೃತಿಕ ಮಹತ್ವ, ಜೀವವೈವಿಧ್ಯತೆ ತಾಣ, ಔಷಧೀಯ ಸಸ್ಯಗಳು, ಸಂಜೀವಿನಿ ಪರ್ವತ, ಸುರಕ್ಷಿತ ಅರಣ್ಯ ಪ್ರದೇಶ.

### ಪ್ರಸ್ತಾವನೆ:

ಉತ್ತರ ಕರ್ನಾಟಕದ ಪ್ರಮುಖ ಜಿಲ್ಲಾ ಕೇಂದ್ರವಾದ ಗದಗದಿಂದ ದಕ್ಷಿಣಕ್ಕೆ 25 ಕಿ.ಮೀ ಅಂತರದಲ್ಲಿರುವ ಐತಿಹಾಸಿಕ ಗಿರಿದಾಮ ಕಪ್ಪತ್ತಗುಡ್ಡ. ಈ ಪರಿಸರದಲ್ಲಿ 30ಕ್ಕೂ ಹೆಚ್ಚು ಕೆರೆಗಳು, ಹಳ್ಳಗಳು, ಝರಿಗಳು, ಕೊಳ್ಳಗಳು ಮತ್ತು ಪಡಿಗಳಿವೆ. ಇವು ಪ್ರಾಣಿ–ಪಕ್ಷಿಗಳಿಗೆ ನೀರಿನ ದಾಹವನ್ನು ಇಂಗಿಸುತ್ತಿದ್ದವು. ಅಲ್ಲದೇ ಈ ಅರಣ್ಯದಲ್ಲಿ ಚಿರತೆ, ಕೃಷ್ಣಮೃಗ, ನರಿ, ತೋಳ, ಕಾಡುಹಂದಿ, ಮುಳ್ಳುಹಂದಿ, ಕಾಡುಬೆಕ್ಕು, ಚುಕ್ಕೆ ಜಿಂಕೆ, ಕಾಡು ಕುರಿ, ಕತ್ತೆಕಿರುಬ, ಕರಡಿ, ಮೊಲ ಮುಂತಾದ ಕಾಡುಪ್ರಾಣಿಗಳು, ನವಿಲು, ಹೈನಾ, ಪಾರಿವಾಳ, ಗಿಳಿ, ಗುಬ್ಬಿ, ಕಾಡುಕೋಳಿ, ನೀಲಕಂಠಪಕ್ಷಿ ಮುಂತಾದ ಪಕ್ಷಿಸಂಕುಲಗಳಿಗೆ ಆಶ್ರಯತಾಣವಾಗಿದ್ದ ಇದನ್ನು ರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲೆಯೂ ಇದೆ ಈ ಹಿನ್ನೆಲೆಯಲ್ಲಿ ಅನೇಕ ಕನ್ನಡ ಪತ್ರಿಕೆಗಳು ಈ ನಿಸರ್ಗ ಪ್ರದೇಶವನ್ನು ರಕ್ಷಿಸುವಂತೆ ಜನರಲ್ಲಿ ಜಾಗೃತಿ ಮೂಡಿಸುತ್ತಲೇ ಇವೆ ಅವುಗಳನ್ನು ನಾಡಿನ ಜನರ ಅವಗಾಹನೆಗೆ ತರಬಯಸುವುದೇ ಈ ಲೇಖನದ ಉದ್ದೇಶ.

### ಪತ್ರಿಕೆಗಳಲ್ಲಿ ಕಂಡು ಬಂದ ಮುಖ್ಯಾಂಶಗಳು:

ಡಿಸೆಂಬರ್ 19, 2015ರಲ್ಲಿ ರಾಜ್ಯ ಸರಕಾರ ಕಪ್ಪತ್ತಗುಡ್ಡವನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸಿತ್ತು. ಇದಕ್ಕೂ ಮುಂಚಿತವಾಗಿ 2013ರಲ್ಲಿ ವನ್ಯಜೀವಿ ಸಂರಕ್ಷಣಾ ಸಮಿತಿಯ ಪರವಾಗಿ ಪ್ರಸಿದ್ಧ ಕ್ರಿಕೆಟಿಗರಾದ ಅನಿಲ್ ಕುಂಬ್ಳೆ ಅವರ ನೇತೃತ್ವದಲ್ಲಿ ಸಭೆ ನಡೆಸಿ ಈ ಭಾಗದ ನಿವಾಸಿಗಳ ಅಹವಾಲು ಸ್ವೀಕರಿಸಲಾಗಿತ್ತು. ಆದರೆ ಇತ್ತೀಚೆಗೆ ನವೆಂಬರ್ 4,

2016ರಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಬೇಕು ಎಂಬ ದ್ವಂದ್ವ ಹೇಳಿಕೆ ನೀಡಿದ ರಾಜ್ಯ ಸರ್ಕಾರ ಸಂರಕ್ಷಿತ ಅರಣ್ಯ ಪ್ರದೇಶ ಎಂಬ ತನ್ನ ಮೊದಲಿನ ಆದೇಶವನ್ನು ಹಿಂದಕ್ಕೆ ಪಡೆದಿರುವುದು, ಈ ಭಾಗದಲ್ಲಿ ಗಣಿಗಾರಿಕೆಯನ್ನು ಮಾಡಬೇಕು ಎಂದು ಸಿದ್ಧಗೊಂಡಿರುವ ರಾಮಗಡ ಮೈನ್ಸ್‌ನ ಹಿತ ಕಾಯುವ ನಿಟ್ಟಿನಲ್ಲಿ ಸರ್ಕಾರ ಉದ್ಯಮಿಗಳೊಂದಿಗೆ ಸಹಕರಿಸಲು ಪಣ ತೊಟ್ಟಿರುವ ಪ್ರಯುಕ್ತವಾಗಿ ಹಲವಾರು ಮಠಾಧೀಶರು, ಶಿಕ್ಷಕರು, ವಿದ್ಯಾರ್ಥಿಗಳು, ಸಾಹಿತಿಗಳು, ರಾಜಕೀಯ ನೇತಾರರು, ನೆರೆಯ ಗ್ರಾಮಗಳ ಕೆಲವೊಂದು ಮುಖಂಡರ ನೇತೃತ್ವದಲ್ಲಿ ಕಪ್ಪತ್ತಗುಡ್ಡದ ಉಳಿವಿಗಾಗಿ ಹೋರಾಟ ಮಾಡಿರುವುದು ಈ ಪತ್ರಿಕೆಯ ವರದಿಗಳ ಮುಖಾಂತರ ತಿಳಿದುಬರುತ್ತದೆ.

1978ರ ಪೂರ್ವದಲ್ಲಿ ಆಗಿರುವ ಒತ್ತುವರಿಗಳನ್ನು ಗಮನಿಸಿದಾಗ ಇಡೀ ರಾಜ್ಯದಲ್ಲಿ 19 ಸಾವಿರ ಫಲಾನುಭವಿಗಳನ್ನು ಸುಮಾರು 35 ಸಾವಿರ ಎಕರೆ ಜಮೀನನ್ನು ಅವರು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ದಾಖಲೆಯಿಂದ ಕಂಡುಬಂದಿದೆ. ಈ ಭೂಮಿಯನ್ನು ಫಲಾನುಭವಿಗಳಿಗೆ ನೀಡುವ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ನೀಡಿದಾಗ ಸರಕಾರವು ಈಗಾಗಲೇ 10 ಎಕರೆ ಜಮೀನನ್ನು ಉಳುಮೆ ಮಾಡುತ್ತಿದ್ದು, ಮತ್ತೆ ಅರಣ್ಯ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರೆ ಅಂತವರಿಗೆ ಜಮೀನು ವರ್ಗಾವಣೆ ಮಾಡಲು ಬರುವುದಿಲ್ಲ ಮತ್ತು ಅವರ ಸ್ವಂತ ಜಮೀನು ಮತ್ತು ಒತ್ತುವರಿ ಮಾಡಿಕೊಂಡಿರುವ ಜಮೀನು ಸೇರಿ 3 ಎಕರೆ ಮೀರಬಾರದು ಎನ್ನುವ ಷರತ್ತು ಹಾಕಲಾಗಿತ್ತು. ಇದನ್ನು ಜಿಲ್ಲಾಧಿಕಾರಿಗಳು ಈ ಸಂಬಂಧ ದಾಖಲೆಗಳನ್ನು ಪರಿಶೀಲಿಸಿ ಜಮೀನು ನೀಡಲಾಯಿತು.

1980ರಲ್ಲಿ ಕೇಂದ್ರ ಸರ್ಕಾರದ ಅರಣ್ಯ ಕಾಯಿದೆಯ ಪ್ರಕಾರ ಗಿರಿಜನರಿಗೆ ಭೂದಾಖಲೆಗಳು, ಗ್ರಾಮಲೆಕ್ಕಿಗರ ಮಾಹಿತಿಯನ್ನು ನೀಡಿ ದಿನಾಂಕ 13-12-2005ರವರೆಗೆ ಯಾರಾದರೂ ಜಮೀನನ್ನು ಅಕ್ರಮಿಸಿಕೊಂಡಿದ್ದರೆ, ಅರಣ್ಯ ಭಾಗದಲ್ಲಿ ವಾಸವಾಗಿರುವ ಗಿರಿಜನರು ಜಮೀನನ್ನು ಮಂಜೂರು ಮಾಡಿಕೊಡಬಹುದು. ಈ ಮೊದಲು ಈ ಜನರು ಅಕ್ರಮವಾಗಿ ಪಡೆದಿರುವ ಭೂಮಿಗೆ ಸಂಬಂಧಿಸಿದ ದಾಖಲೆಗಳನ್ನು ಸರಕಾರಕ್ಕೆ ಪೂರೈಸಬೇಕು ಎಂದು ತಿಳಿಸಲಾಯಿತು. ಮತ್ತೆ ಪರಿಶಿಷ್ಟ ಪಂಗಡದ ಜನಾಂಗದವರನ್ನು ಹೊರತುಪಡಿಸಿ, ಬೇರೆ ಜನಾಂಗದವರು ಈ ಸಂಬಂಧ ಎರಡು ದಾಖಲೆಗಳನ್ನು ಕೊಡಬೇಕಾಗುತ್ತದೆ. ಮೂರು ತಲೆಮಾರಿನಿಂದ ಈ ಜಮೀನಿನ ಮೇಲೆ ಅವಲಂಬನೆಯಾಗಿದ್ದಾರೆ ಎಂದು ಹೇಳಬೇಕಾಗುತ್ತದೆ.

ಕಪ್ಪತ್ತಗುಡ್ಡದಲ್ಲಿ ಸಾಕಷ್ಟು ಸಂಖ್ಯೆಯ ಔಷಧಿ ಸಸ್ಯಗಳು ಇದ್ದು, ಇವುಗಳ ಸಂರಕ್ಷಣೆ ಅವಶ್ಯಕವಾಗಿದೆ, ಮತ್ತೆ ಕಪ್ಪತ್ತಗುಡ್ಡಕ್ಕೆ ಬೆಂಕಿ ಬಿದ್ದಿದೆ ಎಂದು 2016-17ರಲ್ಲಿ ವರದಿಯಾಗಿದೆ. ಹುಬ್ಬಳ್ಳಿ ತಾಲೂಕಿನ ಶಿರೇವಾಡದ ವಿನೂತನ ಸೇವಾ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಲಿಂಗರಾಜ ನಿಡುವಳಿಯವರ ಪ್ರಕಾರ ಈ ಕಪ್ಪತ್ತಗುಡ್ಡದ ಪ್ರದೇಶದಲ್ಲಿ ಈಗ ಪವನ ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ಪವನ ವಿದ್ಯುತ್ ಕಂಬಗಳ ಫ್ಯಾನ್‌ನ ಶಬ್ದದಿಂದ ಮೃದು ಸ್ವಭಾವದ ಅನೇಕ ಪಕ್ಷಿಗಳು ಹೆದರಿ ಅಲ್ಲಿಂದ ಕಣ್ಮರೆಯಾಗುತ್ತಿರುವ ವಿಚಾರ ಪಕ್ಷಿತಜ್ಞರು ಮತ್ತು ನಾವು ಕಣ್ಣಾರೆ ಕಂಡ ಸಂಗತಿಯಾಗಿದೆ. ಅಷ್ಟೇ ಅಲ್ಲದೆ, ಈ ಪವನ ವಿದ್ಯುತ್‌ನಿಂದಾಗಿ ಬೆಂಕಿ ಕಿಡಿಗಳು ತಗಲುವುದರ ಮೂಲಕ ಕಾಳ್ಗಿಚ್ಚಿಗೆ ಕಾರಣವಾಗಿದೆ ಕಾರಣ ಈ ಪವನ ವಿದ್ಯುತ್ ಕಂಬಗಳನ್ನು ಬೇರೆಡೆ ಸಾಗಿಸುವುದು ಒಳಿತು ಎಂದರು.

**ಕಪ್ಪತ್ತಗುಡ್ಡದ ರಕ್ಷಣೆಗೆ ಮಠಾಧೀಶರ ಹೋರಾಟ:**

ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಪತ್ರಿಕೆಗಳ ಮೂಲಕ ಕೊಟ್ಟ ಸಂದೇಶ.

ಕಪ್ಪತ್ತಗುಡ್ಡದಲ್ಲಿ ಗಣಿಗಾರಿಕೆಯನ್ನು ನಡೆಸಿದರೆ ಭೂಪಾಲ್ ದುರಂತಕ್ಕಿಂತ ದೊಡ್ಡದಾದ ದುರಂತ ಕಪ್ಪತ್ತಗುಡ್ಡದ ಪರಿಸರದಲ್ಲಿ ಆಗುತ್ತದೆ. ಗಣಿಗಾರಿಕೆಯಿಂದ ಬಳ್ಳಾರಿಯಲ್ಲಾದ ನಷ್ಟ ಎಲ್ಲರಿಗೂ ಗೊತ್ತಿದೆ. ದೆಹಲಿಯಲ್ಲಿ ಗಾಳಿ ವಿಷವಾಗಿದೆ. ಇಂತಹ ಹಲವಾರು ಉದಾಹರಣೆಗಳು ನಮ್ಮ ಮುಂದೆ ಇವೆ. ಆದರೂ ಕಪ್ಪತ್ತಗುಡ್ಡದಲ್ಲಿ ಗಣಿಗಾರಿಕೆ ನಡೆಸುವ ಲಾಬಿಗೆ ಸರಕಾರ ಬಾಗಿಯಾಗಿದೆ ಎಂಬ ಅನುಮಾನ ಮೂಡುತ್ತಿದೆ. ಸರ್ಕಾರದ ಪರಿಸರವಿರೋಧಿ ಕ್ರಮದ ವಿರುದ್ಧ ಪಕ್ಷಾತೀತ ಹೋರಾಟಕ್ಕೆ ಮುಂದಾಗುತ್ತೇವೆ. ಅರಣ್ಯ ಪ್ರದೇಶ ರಕ್ಷಣೆಗಾಗಿ ಹಸಿರು ಪೀಠದ ಮುಂದೆ ಪ್ರಶ್ನಿಸಲಾಗುವುದು ಎಂದರು ಹಾಗೂ ಶಿರಹಟ್ಟಿಯ ಎಫ್.ಎಮ್.ದಬಾಲಿ ಕಾಲೇಜು ಶಾಲಾ ಆವರಣದಲ್ಲಿ ಆಯೋಜಿಸಿರುವ ಜಿಲ್ಲಾ ಕನ್ನಡ 8ನೇ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಶ್ರೀಗಳು ಹೋರಾಟಕ್ಕೆ ಕರೆದರೆ ರಾಜಕೀಯ ನಾಯಕರು ಹೂಹುಂ ಅಂತಾರೆ. ಹೀಗಾಗಿ ನಾವೇ ಹೋರಾಟದ ಹಾದಿ ತುಳಿಯುವುದು ಅನಿವಾರ್ಯ ಎಂದು ಹೇಳಿದರು. ಋಷಿಮುನಿಗಳು ತಪಗೈದ ಪವಿತ್ರ ಕ್ಷೇತ್ರವಾಗಿದೆ. ಇಲ್ಲಿನ ಖನಿಜ ಸಂಪತ್ತಿನ ಆಸೆಗಾಗಿ ಕೆಲವರು ಇಲ್ಲದ ಕಾರಣ ಸೃಷ್ಟಿಸಿ ಸರ್ಕಾರವನ್ನು ಹಾದಿ ತಪ್ಪಿಸುತ್ತಿದ್ದಾರೆ. ಅಲ್ಲದೇ ಇಲ್ಲಿ ಭೂ–ಮಾಫಿಯಾ ಕಾಲಿರಿಸುತ್ತಿದೆ. ಹಾಗಾದರೆ ಸರ್ವನಾಶ ಖಂಡಿತ ಎಂದು ಹೇಳಿದರು. ಕಪ್ಪತ್ತಗುಡ್ಡ ಪ್ರದೇಶ ಸುಮಾರು 80 ಸಾವಿರ ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ. ಅದರಲ್ಲಿ 40 ಸಾವಿರ ಎಕರೆ ಪ್ರದೇಶ ಮಾತ್ರ ಸಂರಕ್ಷಿತ ಪ್ರದೇಶ ಎಂದು ಆದೇಶ ಮಾಡಿದ್ದು, ಅದನ್ನು ಹಿಂತೆಗೆದುಕೊಳ್ಳಲು ಸರ್ಕಾರ ಸೂಕ್ತ ಕಾರಣ ನೀಡುತ್ತಿಲ್ಲ. ಇಲ್ಲಿ 1939ರಲ್ಲಿ ಲಂಬಾಣಿ ಜನಾಂಗದವರಿಗೆ ಸರ್ಕಾರ ಜಮೀನು ನೀಡಿತ್ತು. ಅವರಿಗೆ ಆಮಿಷವೊಡ್ಡಿ ಭೂಮಿ ಖರೀದಿಸಿದ್ದು, ಅಲ್ಲಿ ನೆಲೆಯೂರಿ ಕಪ್ಪತ್ತಗುಡ್ಡ ಕಬಳಿಸುವ ಯತ್ನವಾಗಿದೆ. ಇದಕ್ಕೆ ಜನರ ವಿರೋಧವಿದೆ. ಅಲ್ಲದೇ ಸಂರಕ್ಷಿತ ಅರಣ್ಯ ಪ್ರದೇಶ ಮುಂದುವರಿಸುವ ನಂಬಿಕೆ ಹೊಂದಿದ್ದು, ಇಲ್ಲದಿದ್ದರೆ ಹೋರಾಟಕ್ಕೆ ಇಳಿಯುವುದು ಅನಿವಾರ್ಯ ಎಂದು ಶ್ರೀಗಳು 'ಸಂರಕ್ಷಿತ ಪ್ರದೇಶ ಮುಂದುವರಿಸದಿದ್ದರೆ ಹೋರಾಟ' ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಕಪ್ಪತ್ತಗುಡ್ಡದಲ್ಲಿ ಚಿನ್ನದ ಗಣಿಗಾರಿಕೆ ನಡೆಸಲು ಬಲ್ಡೋಟಾ ಕಂಪನಿಯ ಹುನ್ನಾರ ನಡೆಸಿದ್ದೇ ಆದರೆ ರಾಯಚೂರು ಜಿಲ್ಲೆಯ ಹಟ್ಟಿಯಲ್ಲಿ ಚಿನ್ನದ ಕಂಪನಿಯಿದ್ದರೂ ಸ್ಥಳೀಯರು ತುತ್ತು ಅನ್ನಕ್ಕೂ ಪರದಾಡುವ ಸ್ಥಿತಿಯಿದೆ. ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಗಣಿಗಾರಿಕೆಯಿಂದ ಜನಸಾಮಾನ್ಯರಿಗೆ ಯಾವುದೇ ಪ್ರಯೋಜನವಿಲ್ಲ ಎಂಬುದು ಸರ್ಕಾರಕ್ಕೆ ಗೊತ್ತಿದ್ದರೂ ಜಾಣ ಕುರುಡು ಪ್ರದರ್ಶಿಸುತ್ತಿದೆ ಎಂದು ಕಿಡಿಕಾರಿದರು. ಕಪ್ಪತ್ತಗುಡ್ಡದ ಬಗ್ಗೆ ಯಾವುದೇ ರಾಜಕೀಯ ಪಕ್ಷಕ್ಕೂ ಕಾಳಜಿಯಿಲ್ಲ. ಬ್ರಿಟಿಷರ ಆಡಳಿತದಲ್ಲಿ ಇದನ್ನು ಮೀಸಲು ಅರಣ್ಯ ಪ್ರದೇಶವೆಂದು ಘೋಷಿಸಲಾಗಿತ್ತು. ಅವರಿಗಿದ್ದ ಕಾಳಜಿ ನಮ್ಮದೇ ಸರ್ಕಾರಕ್ಕೆ ಇಲ್ಲದಂತಾಗಿದೆ ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಅರಣ್ಯ ರಕ್ಷಣೆಯಿಂದ ಮಾತ್ರ ಬರಗಾಲದಿಂದ ಮುಕ್ತಿ ಪಡೆಯಲು ಸಾಧ್ಯ. ಅಲ್ಲಿರುವ ಅಮೂಲ್ಯ ಸಸ್ಯ, ವನ್ಯಜೀವಿ, ಖನಿಜಸಂಪತ್ತನ್ನು ಉಳಿಸಬೇಕು. ಕಪ್ಪತ್ತಗುಡ್ಡದ ಸಂರಕ್ಷಣೆ ವಿಚಾರದಲ್ಲಿ ಸರ್ಕಾರ ಶೀಘ್ರವೇ ತನ್ನ ನಿರ್ಧಾರ ಪ್ರಕಟಿಸಬೇಕು ಎಂದು ಶ್ರೀಗಳು ಆಗ್ರಹಿಸಿದರು. ಸರ್ಕಾರ ಕಪ್ಪತ್ತಗುಡ್ಡದ ವಿಷಯದಲ್ಲಿ ತಲೆದೋರಿರುವ ನ್ಯಾಯಾಂಗದ ತೊಡಕುಗಳನ್ನು ನಿವಾರಿಸಿ ಈ ಕೂಡಲೇ ಕಪ್ಪತ್ತಗುಡ್ಡದ ವಿಷಯದಲ್ಲಿ ತನ್ನ ಬದ್ಧತೆಯನ್ನು ಪ್ರದರ್ಶಿಸಿ ಜನರ ಭಾವನೆಗಳಿಗೆ ಮನ್ನಣೆ ನೀಡಬೇಕು. ಸರ್ಕಾರ ಕೂಡಲೇ ಕಪ್ಪತ್ತಗುಡ್ಡವನ್ನು ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಿಸಬೇಕು ಇದರಲ್ಲಿ ಸರ್ಕಾರ ಬದ್ಧತೆ ಪ್ರದರ್ಶಿಸಲಿ ಎಂದು ಶ್ರೀಗಳು ಹೇಳಿದರು. ಡೋಣಿ ಗ್ರಾಮದಲ್ಲಿ ವಿಶ್ವಪರಿಸರ ಮತ್ತು ಕಪ್ಪತ್ತಗುಡ್ಡ ಸಂರಕ್ಷಣಾ ವೇದಿಕೆ ಹಾಗೂ ಕನ್ನಡ

ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಜರುಗಿದ ಕಪ್ಪತ್ತಗುಡ್ಡ ಉತ್ಸವದಲ್ಲಿ ಇದೇ ಮಾತನ್ನು ಶ್ರೀಗಳು ಹೇಳಿದರು.

**ಶ್ರೀ. ಮ.ನಿ.ಪ್ರ. ಶಿವಕುಮಾರ ಸ್ವಾಮಿಗಳು ನಂದಿವೇರಿ ಮಠ ಪತ್ರಿಕೆಗಳ ಮೂಲಕ ಕೊಟ್ಟ ಸಂದೇಶ.**

ಕಪ್ಪತ್ತಗಿರಿಯು ಸ್ಥಳೀಯ ಜನರ ಬಾಯಲ್ಲಿ ಸಿಕ್ಕು ಕಪ್ಪತ್ತಗುಡ್ಡ ಆಗಿದೆ. ಕಪ್ಪತ್ತಗುಡ್ಡದ ಹೃದಯ ಭಾಗದಲ್ಲಿರುವ ಶ್ರೀ ನಂದಿವೇರಿಮಠದ ಕಪೋತಗಿರಿ ನಂದಿವೇರಿಮಠ ಸೇವಾ ಫೌಂಡೇಶನ್‌ನ ಸಹಯೋಗದಲ್ಲಿ ಈ ತನಕ ಸರ್ವೆ ಮಾಡಿದ ಅಧ್ಯಯನದ ಪಕ್ಷಿನೋಟವನ್ನು ಇಲ್ಲಿ ಕೊಡಲು ಪ್ರಯತ್ನಿಸಲಾಗಿದೆ. ಈ ಅಧ್ಯಯನವು 2003ರಿಂದ ನಿರಂತರವಾಗಿ ನಡೆದಿದ್ದು, ಅಧ್ಯಯನದ ಕೊನೆಗೆ ಸಮಗ್ರ ಔಷಧೀಯ ಸಸ್ಯಗಳ ಫೋಟೋ ಸಹಿತವಾದ ಹೊನ್ನ ಹೊತ್ತಿಗೆಯೊಂದು ಶ್ರೀಮಠದಿದ ಪ್ರಕಟವಾಗಲಿದೆ.

**ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳು ಸಂಸ್ಥಾನಮಠ, ಮುಂಡರಗಿ ಪತ್ರಿಕೆಗಳ ಮೂಲಕ ಕೊಟ್ಟ ಸಂದೇಶ.**

ಕಪ್ಪತ್ತಗುಡ್ಡ ಈ ಭಾಗದ ಜೀವನಾಡಿ. ಕಪ್ಪತ್ತಗುಡ್ಡ ಸಂರಕ್ಷಿತ ಪ್ರದೇಶವಾದರೆ ನಮ್ಮೆಲ್ಲರ ಜೀವ ಉಳಿಯುತ್ತದೆ. ಸರ್ಕಾರ ಪ್ರಕೃತಿ ಸಂಪತ್ತಿನ ವಿಷಯದಲ್ಲಿ ಆಟವಾಡಬಾರದು. ಪ್ರಕೃತಿಯನ್ನು ಉಳಿಸಲು ನಮ್ಮ ಉಸಿರನ್ನು ಮುಡುಪಾಗಿಡಬೇಕು ಅಂದಾಗ ಮಾತ್ರ ನಮ್ಮ ಮುಂದಿನ ಪೀಳಿಗೆ ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ, ಕಪ್ಪತ್ತಗುಡ್ಡವನ್ನು ಸಂರಕ್ಷಿತ ಪ್ರದೇಶ ಎಂದು ಸರ್ಕಾರ ಮತ್ತೆ ಘೋಷಣೆ ಮಾಡಬೇಕು. ಇಲ್ಲವಾದರೆ ಮಠಾಧೀಶರು ಬೀದಿಗಿಳಿದು ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ. ದಕ್ಷಿಣದಲ್ಲಿ ಕಾವೇರಿಗೆ ಎಷ್ಟು ಮಹತ್ವ ಇದೆಯೋ ಅಷ್ಟೇ ಸ್ಥಾನಮಾನ ಕಪ್ಪತ್ತಗಿರಿಗೆ ಇದೆ. ಮಾನವರ ಸ್ವಾರ್ಥದಿಂದಾಗಿ ಹೊಟ್ಟೆಯನ್ನು ಬಗೆದಂತೆ ಕಪ್ಪತ್ತಗುಡ್ಡ ಬರಿದಾಗಿ ಬರಗಾಲಕ್ಕೆ ಆಹ್ವಾನ ನೀಡುತ್ತ ಬಂದಿದೆ. ಪರಿಸರವಾದಿಗಳ ಪ್ರಯತ್ನದಿಂದ ಕಳೆದ ವರುಷವೇ ಕಪ್ಪತ್ತಗುಡ್ಡ ಸಂರಕ್ಷಿತ ಅರಣ್ಯವೆಂದು ಘೋಷಿತವಾಗಿತ್ತು ಮತ್ತೆ ವಿನಾಕಾರಣದಿಂದ ಆ ಆಜ್ಞೆಯನ್ನು ತೆಗೆದು ಹಾಕಿರುವುದು ದುರದೃಷ್ಟಕರ. ಅಧಿಕಾರಿಗಳು, ರಾಜಕಾರಣಿಗಳು ನಾಡಿನ ಹಿತ ಬಯಸುವುದಾದರೆ ಕಪ್ಪತ್ತಗುಡ್ಡವನ್ನು ಸಂರಕ್ಷಿಸುವುದು ಅತ್ಯವಶ್ಯವಾಗಿದೆ. ಕಪ್ಪತ್ತಗುಡ್ಡವು ನಾಡಿಗರ ನಾಡಿನ ಕಲ್ಯಾಣಕ್ಕಾಗಿ ತೀವ್ರವಾಗಿ ರಕ್ಷಣೆಯಾಗಲಿ. ಅದು ಸಹ್ಯಾದ್ರಿಯ ಶಿಖರವೆಂಬುದನ್ನು ಸರ್ಕಾರ ಅವಶ್ಯವಾಗಿ ಅರಿಯಬೇಕು. ಕಪ್ಪತ್ತಗುಡ್ಡ ಉಳಿಸಿಕೊಳ್ಳಬೇಕಾದರೆ ಹೋರಾಟ ಅವಶ್ಯ ಎಂದು ಶ್ರೀಗಳು ಹೇಳಿದರು.

**ಡಾ. ಸಿದ್ದರಾಮ ಸ್ವಾಮೀಜಿಯವರು.**

ದಿನಾಂಕ: 03/09/2022 ರಂದು ಪ್ರಜಾವಾಣಿ ಪತ್ರಿಕೆಯಲ್ಲಿಯ ವರದಿಯಂತೆ ಕಪ್ಪತ್ತಗುಡ್ಡ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುವುದರಿಂದ ವಾಯು ಮತ್ತು ಜಲಮಾಲಿನ್ಯ ಉಂಟಾಗುತ್ತದೆ. ಮೊದಲೇ ದುರಸ್ತಿ ಕಾಣದ ರಸ್ತೆಗಳು ಮತ್ತಷ್ಟು ಹಾಳಾಗುತ್ತವೆ. ಗಣಿಗಾರಿಕೆಯಿಂದ ಭೂಕಂಪನ ಉಂಟಾಗಲಿದ್ದು ಇದರಿಂದ ಮಳೆಗಾಲದಲ್ಲಿ ಗುಡ್ಡಗಳು ಕುಸಿಯುವ ಸಂಭವ ಇದೆ. ನಾವು ಈ ಹಿಂದೆ ಕೊಡಗಿನಲ್ಲಿ1 ನೋಡಿದಂತಹ ಸಂಕಷ್ಟಗಳನ್ನು ಕಪ್ಪತ2ªತಗುಡ್ಡ ಪ್ರದೇಶದಲ್ಲೂ ಕಾಣಬೇಕಾಗಿ ಬರಬಹುದು. ಗಣಿಗಾರಿಕೆಯಿಂದ ಜೀವ ಮತ್ತು ಸಸ್ಯವೈವಿಧ್ಯ ನಾಶವಾಗುತ್ತದೆ. ಕಪ್ಪತ್ತಗುಡ್ಡ ಮತ್ತು ಇತರ ವನ್ಯಜೀವಿ ಧಾಮಗಳ ಪರಿಸರ ಸೂಕ್ಷ್ಮ ಪ್ರದೇಶಗಳ ವ್ಯಾಪ್ತಿ ಕುಗ್ಗಿಸುವ ನಿರ್ಧಾರ ಸರಿಯೇ? ಹಸಿರುಗುಡ್ಡದ ಉಸಿರು ನಿಲ್ಲದಿರಲಿ.

ಹೀಗೆ ಹಲವಾರು ವಿಷಯಗಳ ಕುರಿತು ಶ್ರೀಗಳು ಪತ್ರಿಕೆಯಲ್ಲಿ ಚರ್ಚಿಸಿದ್ದಾರೆ. ಕಪ್ಪತ್ತಗುಡ್ಡದ ಮಣ್ಣಿನಲ್ಲಿ ಚಿನ್ನವಿದೆ, ಖನಿಜ ಹಾಗೂ ಸಸ್ಯಗಳಲ್ಲಿ ಔಷಧೀಯ ಗುಣವಿದೆ ಎನ್ನುವ ಕಾರಣ ಔಷಧೀಯ ಸಸ್ಯಗಳ ರಾಶಿ ಎಂದು ಕರೆಯಿಸಿಕೊಂಡಿರುವ ಈ ಕಪ್ಪತ್ತಗುಡ್ಡದಲ್ಲಿ 300ಕ್ಕೂ ಹೆಚ್ಚು ಜಾತಿಯ ಔಷಧೀಯ ಸಸ್ಯಗಳು ಇರುವುದು ಕಂಡುಬರುತ್ತದೆ. ಇವುಗಳ ರಕ್ಷಣೆಗೆ ರಾಜ್ಯ ಸರಕಾರ ಮುಂದಾಗಬೇಕು. ಇಲ್ಲವಾದರೆ ವಿಧಿಯಿಲ್ಲದೇ ಜನಜಾಗೃತಿ ಮೂಡಿಸಿ ಕಪ್ಪತ್ತಗುಡ್ಡದ ರಕ್ಷಣೆಗೆ ಹೋರಾಟ ಮಾಡಬೇಕಾಗುವುದು ಎಂದು ಗದಗಿನ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಹುಬ್ಬಳ್ಳಿಯ ಮೂರುಸಾವಿರ ಮಠದ ಗುರು ರಾಜಯೋಗೀಂದ್ರ ಮಹಾಸ್ವಾಮಿಗಳು, ಇನ್ನೂ ಅನೇಕ ಪೂಜ್ಯರು ಜೊತೆಗೂಡಿ ಕಪ್ಪತ್ತಗುಡ್ಡ ಸಂರಕ್ಷಿತ ಪ್ರದೇಶವೆಂದು ಮರುಘೋಷಿಸಲು ಆಗ್ರಹಿಸಿ 6–12–2016ರಂದು ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರಿಗೆ ಮನವಿ ಸಲ್ಲಿಸಿದರು.

**ಅರಣ್ಯ ಅಧಿಕಾರಿಗಳಾದ ಶಿವರಾತ್ರೇಶ್ವರಸ್ವಾಮಿ.**

ದಿನಾಂಕ: 15/03/2020ರ ವಿಜಯ ಕರ್ನಾಟಕ ಪತ್ರಿಕೆಯ ವರದಿಯಂತೆ ಕಪ್ಪತ್ತಗುಡ್ಡಕ್ಕೆ ಬೆಂಕಿ, ಸಸ್ಯ ಸಂಪತ್ತು ನಾಶ, ಸಾವಿರಾರು ಹೆಕ್ಟೇರ್‌ನಷ್ಟು ಸಸ್ಯ ಸಂಪತ್ತು ನಾಶ. ಪ್ರಾಣಿ–ಪಕ್ಷಿ, ನರಿ, ನವಿಲುಗಳಿಗೆ ಆಪತ್ತು. ಹತ್ತಾರು ಎಕರೆ ಕಾಡು ಭಸ್ಮ, ಬೆಂಕಿ ತಡೆಗೆ ಆಧುನಿಕ ವಿಧಾನಗಳಿಲ್ಲ. ಬೆಂಕಿ ಬಿದ್ದ ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿಗಳನ್ನು ಕಳುಹಿಸಿ ನಂದಿಸಲು ಪ್ರಯತ್ನಿಸಲಾಗಿದೆ ಎಂದು ಕಪ್ಪತ್ತಹಿಲ್ಸ್ ವಲಯ ಅರಣ್ಯಾಧಿಕಾರಿ ಶಿವರಾತ್ರೇಶ್ವರಸ್ವಾಮಿ ತಿಳಿಸಿದರು. ಹೀಗೆ ಹಲವಾರು ವಿಷಯಗಳ ಕುರಿತು ಶ್ರೀಗಳು ಪತ್ರಿಕೆಯಲ್ಲಿ ಚರ್ಚಿಸಿದ್ದಾರೆ.

**ರಾಜಕೀಯ ವ್ಯಕ್ತಿಗಳ ದೃಷ್ಟಿಯಲ್ಲಿ ಕಪ್ಪತ್ತಗುಡ್ಡ ಸಂರಕ್ಷಣೆ:**

**ಚಂದ್ರಕಾಂತ ಬೆಲ್ಲದ:**

ಕಪ್ಪತ್ತಗುಡ್ಡ ಕರಗಿದರೆ ಗದಗ ಜಿಲ್ಲೆಯಲ್ಲಿ ಅದರ ಪರಿಣಾಮ ಕಾಣುತ್ತದೆ. ಕೊಪ್ಪಳ, ಗದಗ ಜಿಲ್ಲೆ ಮಳೆ ಕೊರತೆ ಎದುರಿಸುತ್ತಿದೆ. ಗಣಿಗಾರಿಕೆಯಿಂದ ದೇಶದ ಸಂಪತ್ತು ಹಾಳಾಗುತ್ತಿದೆ. ಸಸ್ಯಸಂಪತ್ತಿನಂತೆ ಖನಿಜಸಂಪತ್ತನ್ನು ಬೆಳೆಸಲು ಸಾಧ್ಯವಿಲ್ಲ. ನಿಸರ್ಗಸಂಪತ್ತಿನಲ್ಲಿ ಬದುಕಲು ಎಲ್ಲರಿಗೂ ಹಕ್ಕಿದೆ ಎಂದು ಅವರು ಪತ್ರಿಕೆಯ ಮೂಲಕ ತಿಳಿಸಿದ್ದಾರೆ. ಜಿಲ್ಲೆಯ ಕಪ್ಪತ್ತಗುಡ್ಡವು ಪಶ್ಚಿಮ ಘಟ್ಟದ ಒಂದು ಭಾಗವಾಗಿರುವುದರಿಂದ ಸರಕಾರ ಅದನ್ನು ಸಂರಕ್ಷಿತ ಅರಣ್ಯ ಪ್ರದೇಶವೆಂದು ಮರುಘೋಷಣೆ ಮಾಡಬೇಕೆಂದು ಧಾರವಾಡ ಯೋಗಕ್ಷೇಮದ ಅಧ್ಯಕ್ಷ ಹಾಗೂ ಮಾಜಿ ಶಾಸಕರಾದ ಚಂದ್ರಕಾಂತ ಬೆಲ್ಲದ ಅವರು ನವೋದಯ ಪತ್ರಿಕೆಯ ಮೂಲಕ ಹೇಳಿದರು. ಕಪ್ಪತ್ತಗುಡ್ಡವನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸಬೇಕಾದರೆ ಅಲ್ಲಿನ ಸುತ್ತಮುತ್ತಲಿನ ನಿವಾಸಿಗಳ ಅಭಿಪ್ರಾಯ ತೆಗೆದುಕೊಂಡಿಲ್ಲ ಎನ್ನುವುದಕ್ಕೆ ಈ ಆದೇಶ ಇದೀಗ ಅರ್ಧದಲ್ಲಿ ನಿಂತುಕೊಂಡಿದೆ. ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿ ಸಭೆಯಲ್ಲಿ ಈ ವಿಷಯವನ್ನು ಮಂಡಿಸಲಾಗುವುದು. ಇದೆಲ್ಲವನ್ನೂ ಪರಿಶೀಲಿಸಿ ಸೂಕ್ತ ನಿರ್ಣಯ ಕೈಗೊಳ್ಳಲಾಗುವುದೆಂದು ಜಿಲ್ಲೆಗೆ ಆಗಮಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಭರವಸೆ ನೀಡಿದ್ದಾರೆ.

**ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಚ್. ಕೆ. ಪಾಟೀಲ:**

ಕಪ್ಪತ್ತಗುಡ್ಡ ಹೋರಾಟಕ್ಕೆ ಸಂದ ಮೊದಲ ಜಯ ಅಹೋರಾತ್ರಿ ಧರಣಿ ಅಂತ್ಯಕ್ಕಾಗಿ ಕಪ್ಪತ್ತಗುಡ್ಡ ಸಂರಕ್ಷಿತ ಪ್ರದೇಶವೆಂದು ಘೋಷಿಸಲು ಫೆಬ್ರುವರಿ 20, 2017ರಂದು ಮುಖ್ಯಮಂತ್ರಿಗಳು ಸಭೆ ನಡೆಸಿ ಸರಕಾರದ ಅಧಿಕೃತ ಆದೇಶ ಹೊರಡಿಸುವ ಭರವಸೆ

ನೀಡಿದ್ದಾರೆಂದು ದೂರವಾಣಿ ಮೂಲಕ ಡಾ. ಸಿದ್ಧಲಿಂಗ ಸ್ವಾಮೀಜಿಗಳಿಗೆ ಭರವಸೆ ನೀಡಿದ ಬಳಿಕ ಮೂರು ದಿನಗಳ ಧರಣಿ ಬುಧವಾರ ಅಂತ್ಯಗೊಂಡಿತು. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಂರಕ್ಷಿತ ಅರಣ್ಯ ಆದೇಶವನ್ನು ಹಿಂಪಡೆಯಲಾಗಿದೆ ಎಂದು ಹೇಳಲಾಗುತ್ತಿದೆ. ಆದ್ದರಿಂದ ಅಲ್ಲಿಂದ ವರದಿ ತರಿಸಿಕೊಂಡು ಈ ನಿರ್ಧಾರದಿಂದಾಗುವ ಬದಲಾವಣೆ ಹಾಗೂ ಅಲ್ಲಿನ ಜೀವವೈವಿಧ್ಯತೆಗೆ ಆಗುವ ನಷ್ಟದ ಕುರಿತಂತೆ ಚರ್ಚೆ ನಡೆಸಲಾಗುವುದು. ಒಂದು ವೇಳೆ ಅದು ಪರಿಸರಕ್ಕೆ ಮಾರಕವಾಗಿದ್ದರೆ ಈ ಬಗ್ಗೆ ಸರಕಾರದ ಮಟ್ಟದಲ್ಲಿ ನಿರ್ಧಾರ ಕೈಗೊಂಡು ಅರಣ್ಯ ಪ್ರದೇಶವನ್ನು ಸಂರಕ್ಷಿಸಲಾಗುವುದೆಂದು ತಿಳಿಸಿದರು.

**ರಾಮಕೃಷ್ಣ ದೊಡ್ಡಮನಿ ಶಿರಹಟ್ಟಿ ಶಾಸಕರು:**

ಸಂರಕ್ಷಿತ ಅರಣ್ಯ ಪ್ರದೇಶ ಸ್ಥಾನಮಾನ ಹಿಂಪಡೆದಿದ್ದಕ್ಕೆ ಅಸಮಾಧಾನ ಮತ್ತು ವಿರೋಧವಿದೆ. ಕಪ್ಪತ್ತಗುಡ್ಡವೇ ಈ ಭಾಗದ ಹಸಿರು ಮತ್ತು ಉಸಿರಾಗಿದೆ. ಜಿಲ್ಲೆಯ ಶಾಸಕರೆಲ್ಲರೂ ಸೇರಿ ಮುಖ್ಯಮಂತ್ರಿಗಳಿಗೆ ಇದರ ಗಂಭೀರತೆ ಮತ್ತು ಪರಿಣಾಮಗಳ ಕುರಿತು ಮನವರಿಕೆ ಮಾಡಿಕೊಡುತ್ತೇವೆ ಎಂದು ಹೇಳಿದರು.

ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಎಚ್. ಡಿ. ದೇವೇಗೌಡ. ನಾಗಮಂಗಲ ತಾಲ್ಲೂಕಿನ ಬೆಳ್ಳೂರಿನಲ್ಲಿ ನಡೆದ ಭೈರವೈಕ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ 75ನೇಯ ಜಯಂತೋತ್ಸವ ಹಾಗೂ 4ನೇ ಸಂಸ್ಮರಣೋತ್ಸವ ಅಂಗವಾಗಿ ಜರುಗಿದ ಸಾರ್ಥಕ ಸಮಾಗಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ರಾಜ್ಯದ ಹಿತ ಕಾಯುವ ದೃಷ್ಟಿಯಿಂದ ಕಪ್ಪತ್ತಗುಡ್ಡ ಉಳಿಸುವ ಹೋರಾಟಕ್ಕೆ ಗದಗಿನ ತೋಂಟದಾರ್ಯ ಶ್ರೀಗಳು ದುಮುಕಿದ್ದಾರೆ. ಅಲ್ಲಿ ಗಣಿಗಾರಿಕೆ ಮಾಡಲು ಸರ್ಕಾರ ಯಾವುದೇ ಕಾರಣಕ್ಕೂ ಅವಕಾಶ ಕೊಡಬಾರದು. ರಾಜ್ಯದಲ್ಲಿ ಕಾವೇರಿ, ಮಹದಾಯಿ, ಕೃಷ್ಣಾ ಸೇರಿದಂತೆ ಹಲವು ಸಮಸ್ಯೆಗಳು ಎದುರಾಗಿವೆ. ಈ ಎಲ್ಲ ಸಮಸ್ಯೆಗಳು ಎದುರಾದ ವೇಳೆ ರಾಜ್ಯದ ಎಲ್ಲ ಮಠ–ಮಾನ್ಯಗಳ ಶ್ರೀಗಳು ಹೋರಾಟ ಮಾಡುವ ಮೂಲಕ ನಾಡಿನ ಜನರ ಹಿತ ಕಾಯುವಲ್ಲಿ ಶ್ರಮ ವಹಿಸುತ್ತಿದ್ದಾರೆ ಎಂದು ತಮ್ಮ ಅಧ್ಯಕ್ಷೀಯ ನುಡಿಗಳ ಮೂಲಕ ಮಾತನಾಡಿದರು. ಪಟ್ಟಣದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಉತ್ತರ ಕರ್ನಾಟಕದ ಸಹ್ಯಾದ್ರಿ ಪರ್ವತವೆಂದು ಕರೆಯುವ ಕಪ್ಪತ್ತಗುಡ್ಡವನ್ನು ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಿಸುವಂತೆ ಈಗಾಗಲೇ ಗದುಗಿನ ತೋಂಟದಾರ್ಯ ಶ್ರೀಗಳ ನೇತೃತ್ವದಲ್ಲಿ ಧರಣಿ ನಡೆಸಲಾಗಿದೆ. ಇದಕ್ಕೆ ಸರ್ಕಾರ 20–2–2017ರಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಹೋರಾಟಗಾರರು ಪರಿಸರ ತಜ್ಞರ ಜತೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದೆಂದು ಹೇಳಿಕೆ ನೀಡಿದ್ದಾರೆ. ಈ ಹಿಂದೆ ಕಪ್ಪತ್ತಗುಡ್ಡವನ್ನು ಬ್ರಿಟಿಷರು 44000ಕ್ಕೂ ಹೆಚ್ಚು ಎಕರೆ ಪ್ರದೇಶವನ್ನು ಮೀಸಲು ಅರಣ್ಯ ಎಂದು ಘೋಷಿಸಿದ್ದರು. ಆದರೆ ಈಗಿನ ಸರಕಾರ ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಣೆ ಮಾಡಿ ಬಳಿಕ ಆದೇಶ ಹಿಂಪಡೆದಿರುವುದರ ಹಿಂದೆ ರಾಜಕೀಯದ ಜೊತೆ ಸರಕಾರದ ಸ್ವಹಿತಾಸಕ್ತಿ ಅಡಗಿದೆ ಎಂದು ದೂರಿದರು.

**ವಿಧಾನಸಭೆ ವಿರೋಧಪಕ್ಷದ ನಾಯಕರಾದ ಜಗದೀಶ ಶೆಟ್ಟರ:**

ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ, ಗದಗ ಹಾಗೂ ಬಾಗಲಕೋಟೆ ಜಿಲ್ಲೆಗಳ 13 ತಾಲ್ಲೂಕಿನ ಜನತೆಯ ಜಲ ಜೀವನಾಡಿಯಾಗಿರುವ ಮಹದಾಯಿ ಕಳಸಾಬಂಡೂರಿ ಯೋಜನೆ ಜಾರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಸ್ಥಿಕೆ ವಹಿಸಿ ಗೋವಾ, ಕರ್ನಾಟಕ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿಗಳ ಸಭೆ ಕರೆದು ಸೌಹಾರ್ದಯುತವಾಗಿ

ವಿವಾದ ಇತ್ಯರ್ಥಕ್ಕೆ ಮುಂದಾಗಬೇಕು. ರಾಜ್ಯ ಸರ್ಕಾರದ ಹಿತಾಸಕ್ತಿಗೆ ಕಪ್ಪತ್ತಗುಡ್ಡ ಬಲಿಯಾಗುತ್ತಿದೆ. 19-12-2015ರಂದು ಆದೇಶ ಹೊರಡಿಸಿ ಪುನಃ ಅದನ್ನು ದಿಢೀರನೇ ನವೆಂಬರ್ 11ರಂದು ವಾಪಸ್ ಪಡೆದಿದ್ದೇಕೆ? ಇದರ ಹಿಂದಿರುವ ಒತ್ತಡ ಯಾರದು? ಚಿನ್ನದ ನಿಕ್ಷೇಪ ಹುಡುಕುತ್ತಿರುವ ಕಂಪನಿಯೋ ಅಥವಾ ಗಾಳಿ ವಿದ್ಯುತ್ ಯಂತ್ರಗಳೋ ಎಂಬುದನ್ನು ಸರ್ಕಾರ ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದರು. ಈ ಪ್ರದೇಶದ ಹಿತಕಾಯುವ ದೃಷ್ಟಿಯಿಂದ ಹಾಗೂ ಗಣಿಗಾರಿಕೆಯಿಂದ ಅಲ್ಲಿ ಜೀವಿಸುವ ಬುಡಕಟ್ಟು ಸಮುದಾಯಗಳ ಮೇಲಾಗುವ ದುಷ್ಪರಿಣಾಮಗಳಿಂದ ಆತಂಕಕ್ಕೊಳಗಾದ ಚಂದ್ರಕಾಂತ ಬೆಲ್ಲದ, ಶ್ರೀ ಎಚ್. ಕೆ. ಪಾಟೀಲ, ಬಸವರಾಜ ಹೊರಟ್ಟಿ, ಎನ್. ಎಚ್. ಕೋನರೆಡ್ಡಿ, ಜಗದೀಶ ಶೆಟ್ಟರ ಈ ಎಲ್ಲ ಸಚಿವರು ಹೇಳಿದ ಹೇಳಿಕೆಗಳನ್ನು ಆಧರಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಾವು ಸಹ ಹಿಂದುಳಿದ ವರ್ಗದ ಕುರುಬ ಜನಾಂಗಕ್ಕೆ ಸೇರಿದ ವ್ಯಕ್ತಿ, ತಮ್ಮ ಅಧಿಕಾರಾವಧಿಯಲ್ಲಿ ರಾಜ್ಯದಲ್ಲಿ ಯಾವುದೇ ಹಿಂದುಳಿದ ವರ್ಗ ಹಾಗೂ ದಲಿತರಿಗೆ ಅನ್ಯಾಯವಾಗಲು ಅವಕಾಶ ನೀಡುವುದಿಲ್ಲ. ಸರ್ಕಾರದ ಮೇಲೆ ಎಷ್ಟೇ ಬಲಿಷ್ಠ ವ್ಯಕ್ತಿ ಒತ್ತಡ ಹೇರಿದರೂ ಸಹ ಅದರಿಂದ ದಲಿತರು ಹಿಂದುಳಿದವರ ಹಿತಕ್ಕೆ ಮಾರಕವಾಗುತ್ತಿದ್ದರೆ ಅದನ್ನು ಒಪ್ಪುವುದಿಲ್ಲ ಎಂದು ಹೇಳಿರುವುದು ತಿಳಿಯುತ್ತದೆ. ಇವೆಲ್ಲವುಗಳನ್ನು ಗಮನಿಸಿದಾಗ ಪರಿಸರದ ಉಳಿವು ನಮ್ಮ ಆದ್ಯ ಕರ್ತವ್ಯವಾಗಿದೆ. ಇದರಲ್ಲಿ ಸತ್ಯಾಂಶವಿದೆ ಎಂದು ಹೇಳಬಹುದು.

**ಪರಿಸರ ಪ್ರೇಮಿಗಳ ವಿಚಾರಗಳು:**

ಕಪ್ಪತ್ತಗುಡ್ಡಕ್ಕೆ ಬೇಕಿದೆ ಕಾಯಕಲ್ಪ ಎಂಬ ವಿಷಯವಾಗಿ ದಿನಾಂಕ 6.6.2016ರಂದು ವನ್ಯಜೀವಿ ಅಪರೂಪದ ಸಸ್ಯಸಂಪತ್ತು ರಕ್ಷಿಸಿ. ರಾಜ್ಯ ಸರ್ಕಾರ ಈಗಾಗಲೇ ಕಪ್ಪತ್ತಗುಡ್ಡವನ್ನು ಸಂರಕ್ಷಿತ ಅರಣ್ಯ ಪ್ರದೇಶ ಎಂದು ಘೋಷಿಸಿದೆ. ಆದರೆ ಅದರ ನಂತರ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮೌನ ವಹಿಸಿರುವುದು ಪರಿಸರ ಪ್ರೇಮಿಗಳಲ್ಲಿ ಹಲವು ಸಂಶಯಗಳನ್ನು ಹುಟ್ಟುಹಾಕಿದೆ. ಕಪ್ಪತ್ತಗುಡ್ಡದ ಅರಣ್ಯ ಪ್ರದೇಶದಲ್ಲಿ ಅಶ್ವಗಂಧ, ಮದುಗುಣಕಿ, ಗೊಳಗುಣಕಿ, ಅಂಟುವಾಳ, ಅಳಲೇಕಾಯಿ, ಬೆಲ್ಲಗಡಗೆ, ನೆಲಗುಳ್ಳ, ನೆಲಬೇವು, ಗಣಜಲಿ, ಇಂಗಳ, ಹಾವುಮಕ್ಕಿ, ಹರಿದಹಚಗೆ, ಸಿಡಿಹಾಲೆ, ಈಶ್ವರಬಳ್ಳಿ, ಶಂಖಪುಷ್ಪಿ ದತ್ತೂರಿ, ಜಗಳಗಂಟಿ, ನಸುಗುನ್ನಿ, ಆಡುಸೋಗೆ, ಹೀಗೆ ಸುಮಾರು 240 ಪ್ರಕಾರದ ಅಪರೂಪದ ಔಷಧೀಯ ಸಸ್ಯಗಳು ಬೆಳೆಯುತ್ತಿವೆ. ಅವುಗಳನ್ನು ಅಭಿವೃದ್ಧಿಪಡಿಸುವ ಮತ್ತು ರಕ್ಷಿಸುವ ಕುರಿತು ಸರ್ಕಾರ ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕಿದೆ. ಸಾರ್ವಜನಿಕರಿಗೆ ಕಪ್ಪತ್ತಗುಡ್ಡದಲ್ಲಿ ದೊರೆಯುವ ಔಷಧೀಯ ಸಸ್ಯಗಳ ಪರಿಚಯಿಸುವ ಹಾಗೂ ಆಯುರ್ವೇದ ಔಷಧ ತಯಾರಿಕಾ ಘಟಕ ಸ್ಥಾಪಿಸಿ, ಹಲವು ಜನರಿಗೆ ಉದ್ಯೋಗ ನೀಡುವ ಅವಕಾಶವೂ ಇದೆ. ಕಪ್ಪತ್ತಗುಡ್ಡ ವ್ಯಾಪ್ತಿಯಲ್ಲಿ ಆಯುರ್ವೇದ ವಿಶ್ವವಿದ್ಯಾಲಯ ಸ್ಥಾಪಿಸಬೇಕು ಎಂಬ ಆಗ್ರಹ ಇಲ್ಲಿನ ಜನರದ್ದಾಗಿದೆ. ಕಪ್ಪತ್ತಗುಡ್ಡದಲ್ಲಿ ಸಾವಿರಾರು ನವಿಲುಗಳಿದ್ದು, ಗುಡ್ಡದ ಯಾವುದಾದರೂ ಒಂದು ಪ್ರದೇಶದಲ್ಲಿ ನವಿಲುಧಾಮ ನಿರ್ಮಿಸಬೇಕು. ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಪ್ರಾಣಿ ಸಂಗ್ರಹಾಲಯವನ್ನು ನಿರ್ಮಿಸಬೇಕು. ಕಪ್ಪತ್ತಗುಡ್ಡ ಅಭಿವೃದ್ಧಿಯ ಕುರಿತು ಈ ಭಾಗದ ಪರಿಸರಪ್ರೇಮಿಗಳು, ಚಿಂತಕರು, ಹೋರಾಟಗಾರರು, ಸಾರ್ವಜನಿಕರು ಹಲವಾರು ವರ್ಷಗಳಿಂದ ಆಗ್ರಹಿಸುತ್ತಿದ್ದರೂ ಸರ್ಕಾರ ಜಾಣಕಿವುಡನಂತೆ ವರ್ತಿಸುತ್ತಿದೆ. ಸರ್ಕಾರ ಇನ್ನು ಮೇಲಾದರೂ ಎಚ್ಚೆತ್ತು ಕಪ್ಪತ್ತಗುಡ್ಡದ ಅಭಿವೃದ್ಧಿಗೆ ಹಾಗೂ ಸಂರಕ್ಷಣೆ ಕುರಿತು ಸೂಕ್ತವಾದ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಕಪ್ಪತ್ತಗುಡ್ಡದ ಅಭಿವೃದ್ಧಿ ಕೇವಲ ಬಾಯಿಮಾತಾಗಿ ಉಳಿಯುತ್ತದೆ ಎಂದು ಕಪ್ಪತ್ತಗುಡ್ಡ ಪರಿಸರ ಸಂರಕ್ಷಣಾ ವೇದಿಕೆಯ ಸಂಚಾಲಕರು ತಮ್ಮ

ಅಸಮಾಧಾನ ವ್ಯಕ್ತಪಡಿಸಿದ್ದಾರೆ.

**ಸಾಹಿತಿಗಳ ದೃಷ್ಟಿಯಲ್ಲಿ ಪರಿಸರ ಸಂರಕ್ಷಣೆ:**

ಸಾಹಿತಿಗಳಾದ ಡಾ. ಚನ್ನವೀರ ಕಣವಿ ಹಾಗೂ ಸುರೇಶ ಹೆಬ್ಳಿಕರ್, ರಾಜಕಾರಣಿಗಳು, ಜನಪ್ರತಿನಿಧಿಗಳು ಕಪ್ಪತ್ತಗುಡ್ಡವನ್ನು ಮಾರಿಕೊಳ್ಳುವ ಸಾಧ್ಯತೆ ಇದ್ದು, ಈ ನಿಟ್ಟಿನಲ್ಲಿ ಸರ್ಕಾರ ಸೂಕ್ತ ಹೆಜ್ಜೆ ಇಡಬೇಕು. ಕಪ್ಪತ್ತಗುಡ್ಡವನ್ನು ಮತ್ತೊಂದೆಡೆಗೆ ಎತ್ತಿ ಇಡಲು ಸಾಧ್ಯವಿದ್ದರೆ ವಿಧಾನಸೌಧದ ಪಕ್ಕದಲ್ಲಿ ಇಟ್ಟುಕೊಳ್ಳುತ್ತಿದ್ದರು. ಸುದೈವದಿಂದ ಸಾಧ್ಯವಾಗುವುದಿಲ್ಲ ಎಂದು ನುಡಿದರು. ಸರ್ಕಾರಕ್ಕೆ ಸಲಹೆಗಾರರ ಕೊರತೆ ಇದೆ. ಒತ್ತಡಕ್ಕೆ ಮಣಿದು ಕಪ್ಪತ್ತಗುಡ್ಡಕ್ಕೆ ನೀಡಿದ್ದ ಸಂರಕ್ಷಿತ ಮೀಸಲು ಅರಣ್ಯ ಸ್ಥಾನಮಾನ ಹಿಂಪಡೆದಿರುವ ರಾಜ್ಯ ಸರ್ಕಾರಕ್ಕೆ ಸೂಕ್ತ ಸಲಹೆಗಾರರ ಕೊರತೆ ಕಾಡುತ್ತಿದೆ ಎಂದು ಟೀಕಿಸಿದರು. ನಗರದಲ್ಲಿ ಆರಂಭಿಸಿರುವ ಅಹೋರಾತ್ರಿ ಧರಣಿಯಲ್ಲಿ ಮಂಗಳವಾರ ಪಾಲ್ಗೊಂಡ ಅವರು ಸರ್ಕಾರವು ಕಪ್ಪತ್ತಗುಡ್ಡವನ್ನು ವ್ಯಾಪಾರದ ದೃಷ್ಟಿಯಲ್ಲಿ ನೋಡುತ್ತಿದೆ. ಸರ್ಕಾರ ಎಷ್ಟೇ ಶಕ್ತಿಶಾಲಿಯಾದರೂ ಕಪ್ಪತ್ತಗುಡ್ಡವನ್ನು ಎತ್ತಿ ವಿಧಾನಸೌಧದಲ್ಲಿ ಇಡಲಾಗದು ಎಂದು ತರಾಟೆಗೆ ತೆಗೆದುಕೊಂಡರು. ಮಹಾತ್ಮ ಗಾಂಧೀಜಿ ಉಪವಾಸ ಸತ್ಯಾಗ್ರಹದ ಮೂಲಕ ಬ್ರಿಟಿಷ್ ಸಾಮ್ರಾಜ್ಯ ನಡುಗಿಸಿದಂತೆ ಇಲ್ಲಿನ ಗಾಂಧಿ ವೃತ್ತದಲ್ಲಿ ನಡೆದಿರುವ ಉಪವಾಸ ಸತ್ಯಾಗ್ರಹವು ರಾಜ್ಯ ಸರಕಾರವನ್ನು ನಡುಗಿಸಬಲ್ಲದು. ಸರ್ಕಾರ ತಕ್ಷಣ ಸಮಾಲೋಚನೆ ನಡೆಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು. ಹೋರಾಟಕ್ಕೆ ಧಾರವಾಡ, ಹುಬ್ಬಳ್ಳಿ ವ್ಯಾಪ್ತಿಯ ಎಲ್ಲ ಸಾಹಿತಿಗಳು, ಕವಿಗಳು ಬೆಂಬಲ ನೀಡಿದ್ದಾರೆ. ಕಪ್ಪತ್ತಗುಡ್ಡ ಸಂರಕ್ಷಣೆಗೆ ಮುಂದಾಗದಿದ್ದರೆ ರಾಜ್ಯವ್ಯಾಪಿ ಹೋರಾಟ ಮಾಡಬೇಕಾಗುತ್ತದೆ ಎಂದು ಸರ್ಕಾರಕ್ಕೆ ಎಚ್ಚರಿಸಿದರು. ವೈಜ್ಞಾನಿಕ ರೀತಿಯಲ್ಲಿ ಗಣಿಗಾರಿಕೆ ನಡೆಸದೆ ಪರಿಸರಕ್ಕೆ ಪೂರಕವಾಗಿ ಕೆರೆ, ಹಳ್ಳ-ಕೊಳ್ಳಗಳನ್ನು ಸೃಷ್ಟಿಸದೆ ಮರುಜೀವಗೊಳಿಸಿದ ಇಂತಹ ಉದಾಹರಣೆಗಳಿವೆಯೋ? ಬಹುಶಃ ಇಲ್ಲ. ಇಂತಹ ಸ್ಥಿತಿಯಲ್ಲಿ ಕಪ್ಪತ್ತಗುಡ್ಡದಂತಹ ಸಮೃದ್ಧ ತಾಣವನ್ನು ಗಣಿಗಾರಿಕೆಗೆ ಒಪ್ಪಿಸುವುದು ಎಷ್ಟರಮಟ್ಟಿಗೆ ಸರಿ? ಅರಣ್ಯವೇ ಇಲ್ಲದ ಬಯಲು ಸೀಮೆಯಲ್ಲಿ ಪುಟ್ಟ ಅರಣ್ಯ ತಾಣವಾದ ಕಪ್ಪತ್ತಗುಡ್ಡದ ಒಡಲು ಬಗೆಯಲು ಅವಕಾಶ ನೀಡಿದರೆ ಭವಿಷ್ಯದ ಜನಜೀವನ, ಪರಿಸರ, ಮಳೆ, ಕೃಷಿಯ ಸ್ಥಿತಿ ಏನಾದೀತು? ಎಂಬ ಆತಂಕದ ಪ್ರಶ್ನೆಗಳು ಇವರದ್ದಾಗಿದೆ.

**ನಾಟಿ ವೈದ್ಯರು ಹಾಗೂ ರೈತ ವೇದಿಕೆಯ ಸಂಚಾಲಕರಿಂದ ಪರಿಸರ ಸಂರಕ್ಷಣೆ ಕುರಿತು ಮನವಿ:**

ಕಪ್ಪತ್ತಗುಡ್ಡವನ್ನು ಸಂರಕ್ಷಿತ ಅರಣ್ಯಪ್ರದೇಶವೆಂದು ಘೋಷಿಸಬೇಕು ಹಾಗೂ ಅಲ್ಲಿಯವರೆಗೆ ಈ ನಮ್ಮ ಹೋರಾಟ ನಿಲ್ಲುವುದಿಲ್ಲವೆಂದು ಅಖಿಲ ಭಾರತ ಪಾರಂಪರಿಕ ವೈದ್ಯಪರಿಷತ್ ಟ್ರಸ್ಟ್(ರಿ) ಗದಗ ಸಂಘದ ಅಧ್ಯಕ್ಷರಾದ ಹಾಗೂ ವೈದ್ಯರಾದ ಮಹಾಂತೇಶ ವಿ. ಹಿರೇಮಠ ಹಾಗೂ ನಾಟಿ ವೈದ್ಯರಾದ ಬಸವರಾಜ ಕೊಂಚಗೇರಿ, ಡಾ. ಎಸ್. ಎಫ್. ಕೆಂಬಾವಿಮಠ, ಬಸವರಾಜ ವಿ. ಹಿರೇಮಠ, ಗುರುಶಾಂತಯ್ಯ ಎಸ್. ಬಿ. ತೋಟದ, ನಾಗಯ್ಯ ಹಿರೇಮಠ, ಹರಪನಹಳ್ಳಿ ಮಲ್ಲಯ್ಯ ಮಠದ, ಪೀರಜಾಧೆ ಇವರೆಲ್ಲರೂ ಉಪಸ್ಥಿತರಿದ್ದು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ಮುಂಡರಗಿ ತಾಲ್ಲೂಕಿನ ನೈಸರ್ಗಿಕ ಸಂಪತ್ತನ್ನು ಬಳಸಿಕೊಂಡು ಅದರ ಲಾಭಾಂಶವನ್ನು ಪಡೆಯುತ್ತಿರುವ ಬಂಡವಾಳಶಾಹಿಗಳಿಗೆ ಸರ್ಕಾರ ಮಣಿಯುತ್ತಿದ್ದು, ಮತಬೇಟೆಗಾಗಿ ಜಿಲ್ಲೆಯ ಪ್ರಧಾನ ರಾಜಕಾರಣಿಗಳು ಕಪ್ಪತ್ತಗುಡ್ಡವನ್ನು ಮಾರಾಟ ಮಾಡಲು ಹೊರಟಿರುವುದು

ವಿಷಾದದ ಸಂಗತಿ. ಕಪ್ಪತ್ತಗುಡ್ಡ ಉಳಿಸುವಿಕೆಯಲ್ಲಿ ಪ್ರತಿಯೊಬ್ಬರ ಪಾತ್ರ ಮುಖ್ಯವಾಗಲಿ ಎಂದು ಆಶಿಸಿ ರೈತ ಸಂಘಟನೆಗಳು ಕಪ್ಪತ್ತಗುಡ್ಡವನ್ನು ವನ್ಯಜೀವಿಧಾಮವನ್ನಾಗಿ ಘೋಷಿಸದೇ ಜನರನ್ನು ಕಪ್ಪತ್ತಗುಡ್ಡದಿಂದ ಹೊರಗಿಡುವ ಹುನ್ನಾರವೆಂದು ದೂರಿದರು. ದಿನಾಂಕ 23-9-22ರ ವಿಶ್ವವಾಣಿ ಪತ್ರಿಕೆಯಲ್ಲಿ ರಾಜ್ಯ ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತ ಈಶ್ವರಪ್ಪ ಹಂಚಿನಾಳ ಅವರು ದೇವರನ್ನಂತೂ ನಾವುಗಳು ಪ್ರತ್ಯಕ್ಷವಾಗಿ ಕಾಣುವುದಿಲ್ಲ. ಆದರೆ ನೀಡಿರುವ ಈ ನೈಸರ್ಗಿಕ ಸಂಪತ್ತನ್ನು ಪೂಜಿಸುವ ಕಾರ್ಯ ಮಾಡಬೇಕಾಗಿದೆ. ಅಂತಹ ಸಂಪತ್ತನ್ನು ಹೊಂದಿರುವ ಪವಿತ್ರಕ್ಷೇತ್ರ ಹಾಗೂ ಪಕ್ಕದ ತುಂಗಭದ್ರಾ ನದಿಯನ್ನು ನಾವು ಉಳಿಸಿಕೊಳ್ಳದೇ ಹೋದರೆ ಮುಂಡರಗಿ ತಾಲ್ಲೂಕಿನ ಭವಿಷ್ಯದ ಅಭಿವೃದ್ಧಿ ಎಂದಿಗೂ ಸಾಧ್ಯವಿಲ್ಲ. ಆ ಮೂಲಕ ವಿಶ್ವವಾಣಿ ಪತ್ರಿಕೆ ವಿದ್ಯಾರ್ಥಿಗಳಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸುತ್ತಿರುವುದು ಸೂಕ್ತವಾಗಿದೆ ಎಂದು ಹೇಳಿದರು.

**ಉಪಸಂಹಾರ:**

ಕಪ್ಪತ್ತಗುಡ್ಡ ಪ್ರದೇಶದಲ್ಲಿ ಸಿರಿ ಚಂದನವನ ಎನ್ನುವ ಒಂದು ಕಾರ್ಯಕ್ರಮವನ್ನು ಪ್ರಾರಂಭ ಮಾಡಿ ಹೊಸದಾಗಿ ಶ್ರೀಗಂಧದ ಮರಗಳ ನೆಡುತೋಪುಗಳನ್ನು ನಿರ್ಮಾಣ ಮಾಡಿ ಅಥವಾ ಎಲ್ಲಿ ನೈಸರ್ಗಿಕವಾಗಿ ಈ ರೀತಿಯ ಮರಗಳು ಪುನರ್ ಉತ್ಪತ್ತಿಯಾಗುತ್ತಿವೆಯೋ ಅವುಗಳನ್ನು ರಕ್ಷಣೆ ಮಾಡುವಲ್ಲಿ, ಅವುಗಳ ಜಾಗಕ್ಕೆ ಸುಲಭವಾಗಿ ಪ್ರವೇಶ ಮಾಡದ ರೀತಿಯಲ್ಲಿ ಒಂದು ಗಡಿಯನ್ನು ಗುರುತು ಮಾಡಿ ಅದಕ್ಕೆ ಒಂದು ಚೈನ್ ಲಿಂಕ್ ಮೆಶ್ ಮಾಡುವುದರ ಮೂಲಕ ಅವುಗಳ ರಕ್ಷಣೆ ಮಾಡುವ ಕೆಲಸವನ್ನು ಮಾಡಬೇಕು, ಪಕ್ಷಿಗಳಿಂದ ಈ ಸಸ್ಯಗಳ ಬೀಜಗಳು ಎಲ್ಲ ಕಡೆ ಹರಡಿಕೊಂಡು ಅದು ತನ್ನಷ್ಟಕ್ಕೆ ತಾನೇ ನೈಸರ್ಗಿಕವಾಗಿ ಬೆಳೆಯುತ್ತವೆ. ಈ ರೀತಿ ಎರಡು ಕಡೆ ಯಶಸ್ವಿಯಾಗಿ ಸಿರಿ ಚಂದನ ವನ ಬೆಳೆಯುತ್ತದೆ. ಆ ನಿಟ್ಟಿನಲ್ಲಿ ಇದರ ಜೊತೆಗೆ ಉಳಿದೆಲ್ಲ ಔಷಧಿ ಸಸ್ಯಗಳನ್ನು ಗುರುತಿಸಿ, ಈ ಭಾಗದಲ್ಲಿರುವ ನಾಟಿವೈದ್ಯರ ಸಮ್ಮೇಳನಗಳನ್ನು ಮಾಡಿಕೊಂಡು ಅವರಿಗೆ ಏನೇನು ಔಷಧಿ ಸಸ್ಯಗಳು ಬೇಕಾಗಿವೆಯೋ ಅವುಗಳನ್ನು ರಕ್ಷಣೆ ಮಾಡುವಂತಹ ಕೆಲಸ ಕೆಲವು ಬಾರಿ ಏನಾಗುತ್ತದೆ ಎಂದರೆ ಅರಣ್ಯಮೂಲದಿಂದ ಎಲ್ಲ ಸಸ್ಯಗಳನ್ನು ತೆಗೆದುಕೊಂಡು ಬಂದು ಔಷಧಿ ಸಸ್ಯಗಳು ನಾಳೆ ಸಿಗದೇ ಅಮೆರಿಕದವರೆಗೆ ಹೋಗಬೇಕಾಗಬಹುದು.

**ಪರಾಮರ್ಶನ ಗ್ರಂಥಗಳು:**

1. ಪ್ರಜಾವಾಣಿ ದಿನಪತ್ರಿಕೆ., ಫೆಬ್ರುವರಿ–13, 14, 15, 2017, ಪು.ಸಂ.5
2. ವಿಜಯವಾಣಿ ಹಾಗೂ ಪರಿಸರ ಕಾಳಜಿ ದಿನಪತ್ರಿಕೆ., 18–12–2016
3. ಪ್ರಜಾವಾಣಿ ದಿನಪತ್ರಿಕೆ., ಪು.ಸಂ.5 6.12.2016,
4. ವಿಜಯವಾಣಿ ಹಾಗೂ ಪರಿಸರ ಕಾಳಜಿ ಪತ್ರಿಕೆ., ಪು.ಸಂ.5 18–12–2016,
5. ಪ್ರಜಾವಾಣಿ ದಿನಪತ್ರಿಕೆ., ಪು.ಸಂ.6 27–11–2016
6. ನವೋದಯ ದಿನಪತ್ರಿಕೆ. ಪು.ಸಂ.5 11–01–2017
7. ಪಂಚಮಿ ದಿನಪತ್ರಿಕೆ., ಪು.ಸಂ.4 16–02–2017
8. ಪ್ರಜಾವಾಣಿ ದಿನಪತ್ರಿಕೆ., ಪು.ಸಂ.5 28–02–2017
9. ಸಂಯುಕ್ತ ಕರ್ನಾಟಕ ದಿನಪತ್ರಿಕೆ., ಪು,ಸಂ.4 08–01–2017,
10. ಕನ್ನಡಪ್ರಭ ದಿನಪತ್ರಿಕೆ., ಪು.ಸಂ.5 19–04–2017,
11. ಪ್ರಜಾವಾಣಿ ದಿನಪತ್ರಿಕೆ., ಪು,ಸಂ.5 16–11–2016,
12. ದಿಗಂತ ದಿನಪತ್ರಿಕೆ., ಪು.ಸಂ.6 03–12–2016,
13. ವಿಜಯ ಕರ್ನಾಟಕ ದಿನಪತ್ರಿಕೆ.. 15–03–2020,
14. ವಿಶ್ವವಾಣಿ ದಿನ ಪತ್ರಿಕೆ., ಪು.ಸಂ.4 23–09–2022,
15. ಪ್ರಜಾವಾಣಿ ದಿನಪತ್ರಿಕೆ., ಪು,ಸಂ.7 26–06–2024.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.